MARCH 05, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ಇಂದು ಬೆಳಗಾವಿಗೆ; ಯಡೂರು ಶ್ರೀ ಕ್ಷೇತ್ರದ, ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ.**

**ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ಸಂಘರ್ಷ; ಕನ್ನಡಿಗರ ಸುರಕ್ಷಿತ ವಾಪಸಾತಿಗೆ, ಹಲವು ಕ್ರಮ – ಜಿ. ಪರಮೇಶ್ವರ.**

**ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಇಂದು ಮತದಾರರ ಪಟ್ಟಿ ಪರಿಷ್ಕರಣೆ.**

**ಕಲಬುರಗಿಯಲ್ಲಿ, ಐ.ಟಿ.ಎಫ್. ಮಹಿಳಾ ಟೆನಿಸ್; ಸಿಂಗಲ್ಸ್ ವಿಭಾಗದಲ್ಲಿ, ಅಂಕಿತಾ ರೈನಾ ಹಾಗೂ ಝೀಲ್ ದೇಸಾಯಿ, ಕ್ವಾರ್ಟರ್ ಫೈನಲ್ಸ್ ಪ್ರವೇಶ.**

<><><>

**ಈಗ ವಾರ್ತೆಗಳ ವಿವರ**

<><><>

**ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃ ಣ್ಣನ್, ಇಂದು ಬೆಳಗ್ಗೆ 8.10ಕ್ಕೆ, ಬೆಳಗಾವಿ ವಿಮಾನ ನಿಲ್ದಾಣ ತಲುಪಲಿದ್ದಾರೆ. ಚಿಕ್ಕೋಡಿ ತಾಲೂಕು, ಯಡೂರು ಶ್ರೀ ವೀರಭದ್ರೇಶ್ವರ ಕ್ಷೇತ್ರದಲ್ಲಿ, ಇಂದು ಬೆಳಗ್ಗೆ 10.30ಕ್ಕೆ ದೇಗುಲದ ರಾಜಗೋಪುರ ಕಳಸಾರೋಹಣ ನೆರವೇರಿಸಲಿದ್ದಾರೆ. ಶ್ರೀಶೈಲ ಜಗದ್ಗುರುಗಳ ನೇತೃತ್ವದಲ್ಲಿ, ನಂದಿ ಸೇನೆ ರಥಯಾತ್ರೆಗೆ, ಉಪ ರಾಷ್ಟ್ರಪತಿ ಚಾಲನೆ ನೀಡಲಿದ್ದಾರೆ ಎಂದು, ನಂದಿ ಸೇನೆ ಸಮಿತಿ ಸದಸ್ಯರು, ತಿಳಿಸಿದ್ದಾರೆ. ವಿಜಯಪುರದಲ್ಲಿ ಮಾಹಿತಿ ನೀಡಿದ ಸಮಿತಿಯ ಪದಾಧಿಕಾರಿಗಳು, ಇಂದು ಕಾಗವಾಡ, ನಾಳೆ ಅಥಣಿ, 7 ರಂದು ಬಸವನ ಬಾಗೇವಾಡಿ ಸೇರಿದಂತೆ, 12ನೇ ತಾರೀಖು, ರಾಯಚೂರಿನಲ್ಲಿ ರೈತ ಸಮಾವೇಶ ಜರುಗಲಿದೆ. 15ನೇ ತಾರೀಖು, ಶ್ರೀಶೈಲದ ಶ್ರೀ ಮಲ್ಲಯ್ಯ ಸ್ವಾಮಿ ಸನ್ನಿಧಾನದಲ್ಲಿ, ನಂದಿ ಸೇನೆ ರಥಯಾತ್ರೆ ಸಮಾರೋಪಗೊಳ್ಳಲಿದೆ. ರಾಜ್ಯದ, 20 ಲಕ್ಷ ಜೋಡೆತ್ತಿನ ಕೃಷಿಕರನ್ನು ಒಗ್ಗೂಡಿಸುವುದು, ನಂದಿ ಸೇನೆ ರಥಯಾತ್ರೆಯ ಉದ್ದೇಶವಾಗಿದೆ ಎಂದು, ಹೇಳಿದ್ದಾರೆ.**

<><><>

ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳ ಸಂಘರ್ಷದಿಂದಾಗಿ, ವಿವಿಧ ರಾಷ್ಟ್ರಗಳಲ್ಲಿ ಅನ್ಯಾನ್ಯ ಕಾರಣಗಳಿಂದ ಸಿಲುಕಿಕೊಂಡಿರುವ ಕನ್ನಡಿಗರನ್ನು, ಸುರಕ್ಷಿತವಾಗಿ ತಾಯ್ನಾಡಿಗೆ ಕರೆ ತರಲು, ಯೋಜಿಸಲಾಗಿದೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಸಚಿವರು, ಮುಖ್ಯಮಂತ್ರಿ ಹಾಗೂ ರಾಜ್ಯ ಮುಖ್ಯ ಕಾರ್ಯದರ್ಶಿ ಅವರು, ಕನ್ನಡಿಗರ ಸುರಕ್ಷಿತ ವಾಪಸಾತಿಗೆ ಕೋರಿ, ಕೇಂದ್ರಕ್ಕೆ ಪತ್ರ ಬರೆದಿದ್ದಾರೆ ಎಂದರು. ಇರಾನ್ ಮತ್ತು ಇಸ್ರೇಲ್ ಮಧ್ಯೆ ಸಂಘರ್ಷ ಮುಂದುವರಿದಿದ್ದು, ದುಬೈನಲ್ಲಿ ಸಿಲುಕಿರುವ, ಬೀದರ ಮೂಲದ, ನಾಗನಾಥ ಬಸನಾಳೆ ಹಾಗೂ 7 ಜನ ಸಂಗಡಿಗರೊಂದಿಗೆ, ಸಂಸದ ಸಾಗರ ಖಂಡ್ರೆ ಮಾತನಾಡಿದ್ದಾರೆ. ದುಬೈನಲ್ಲಿ ಸಿಲುಕಿಕೊಂಡಿದ್ದ ಬಳ್ಳಾರಿ ಮೂಲದ, 35 ಜನರ ಪೈಕಿ 33 ಜನ ಇಂದು ರಾಜ್ಯಕ್ಕೆ ವಾಪಸಾಗಲಿದ್ದಾರೆ. ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ, ನಿನ್ನೆ ರಾತ್ರಿ 10.45 ಕ್ಕೆ ಪ್ರಯಾಣ ಆರಂಭಿಸಿದ್ದಾರೆ.

<><><>

‘ಕರ್ನಾಟಕ ದರ್ಶನ’ ಪ್ರವಾಸ ಯೋಜನೆ ಅಡಿ, ಐತಿಹಾಸಿಕ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ, ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿಯ, ಬಸವೇಶ್ವರ ಸರ್ಕಾರಿ ಪ್ರೌಢಶಾಲೆಯ, 8ನೇ ತರಗತಿ ವಿದ್ಯಾರ್ಥಿಗಳೊಂದಿಗೆ, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ, ಸಂವಾದ ನಡೆಸಿ, ಅನುಭವ ಆಲಿಸಿದರು. ಬಳಿಕ ಮಾತನಾಡಿದ ಸಚಿವರು, ರಾಜ್ಯದ ಗ್ರಾಮೀಣ ವಿದ್ಯಾರ್ಥಿಗಳಿಗೆ, ಪಠ್ಯಪುಸ್ತಕಗಳಲ್ಲಿ ಕೇವಲ ಚಿತ್ರಗಳಾಗಿ ಕಂಡಿದ್ದ, ರಾಜ್ಯದ ಭವ್ಯ ಇತಿಹಾಸ, ಕಂಡು ಅನುಭವಿಸಲು, ಶಾಲಾ ಶಿಕ್ಷಣ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ, ಅನುಷ್ಠಾನಗೊಂಡ, ಕರ್ನಾಟಕ ದರ್ಶನ ಯೋಜನೆ, ಸಹಕಾರಿ ಎಂದರು.

<><><>

ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ UIDAI, 1 ಕೋಟಿ 2 ಲಕ್ಷ ಶಾಲಾ ವಿದ್ಯಾರ್ಥಿಗಳ, ಬಯೋಮೆಟ್ರಿಕ್ ನವೀಕರಣಗೊಳಿಸಿದೆ. ದೇಶದಾದ್ಯಂತ, 1 ಲಕ್ಷ 3 ಸಾವಿರಕ್ಕೂ ಹೆಚ್ಚು ಶಾಲೆಗಳಲ್ಲಿ, ಅತ್ಯಂತ ಸುಲಭವಾಗಿ, ಆಧಾರ್ ಕಡ್ಡಾಯ ಬಯೋಮೆಟ್ರಿಕ್ ನವೀಕರಣ MBU ಪ್ರಕ್ರಿಯೆಯನ್ನು ಪೂರ್ಣಗೊಳಿಸಲು, ಯೋಜಿಸಲಾಗಿತ್ತು.

<><><>

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಶನ್ – ಸಂಜೀವಿನಿ ಯೋಜನೆ ಅಡಿ, ಗ್ರಾಮ ಪಂಚಾಯಿತಿ ಪದಾಧಿಕಾರಿಗಳಿಗೆ, ವಾರ್ಷಿಕ ಕ್ರಿಯಾ ಯೋಜನೆ ತಯಾರಿಸುವ ಕುರಿತು, 4 ದಿನಗಳ ತರಬೇತಿ ಕಾರ್ಯಾಗಾರ ಆರಂಭವಾಗಿದೆ. ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಬುಕ್ಕಸಾಗರದ, ಶ್ರೀ ಆಶಾಕಿರಣ ಸಂಜೀವಿನಿ ಒಕ್ಕೂಟದ ಕಚೇರಿಯಲ್ಲಿ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೆ.ತಿಮ್ಮಪ್ಪ, ಕಾರ್ಯಾಗಾರ ಉದ್ಘಾಟಿಸಿದರು. ಬಳಿಕ ಮಾತನಾಡಿ, ಗ್ರಾಮ ಪಂಚಾಯಿತಿ ಒಕ್ಕೂಟಗಳಿಗೆ, ಸರ್ಕಾರದಿಂದ, ಸಮುದಾಯ ಹೂಡಿಕೆ ನಿಧಿ ಬಿಡುಗಡೆಯಾಗಿದೆ ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

**(40 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮುಖ್ಯ ಚುನಾವಣಾ ಆಯೋಗ, ಏಪ್ರಿಲ್‌ನಲ್ಲಿ, ಮತದಾರರ ಪಟ್ಟಿಯ, ವಿಶೇಷ ತೀವ್ರ ಪರಿಷ್ಕರಣೆ ಆರಂಭಿಸಲಿದೆ. ತನ್ನಿಮಿತ್ತ, ಪೂರ್ವಭಾವಿಯಾಗಿ, ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಇಂದು ಬೆಳಗ್ಗೆ 10 ಗಂಟೆಯಿಂದ, ಸಂಜೆ 5ರ ವರೆಗೆ, ಆಯಾ ಮತಗಟ್ಟೆಗಳಲ್ಲಿ, ಬ್ಲಾಕ್ ಮಟ್ಟದ ಅಧಿಕಾರಿಗಳು, 2012ರ ಮತದಾರ ಗುರುತಿನ ಚೀಟಿ ಆಧರಿಸಿ, 2025ರ ಮತದಾರ ಪಟ್ಟಿಯೊಂದಿಗೆ ತುಲನೆ ಮಾಡಿ, ಮ್ಯಾಪಿಂಗ್ ಕಾರ್ಯ ಕೈಗೊಳ್ಳಲಿದ್ದಾರೆ. ಮತದಾರರು ತಮ್ಮ ಮಾಹಿತಿ ನೀಡಿ, ಖಾತ್ರಿ ಪಡಿಸಿಕೊಳ್ಳುವಂತೆ, ಮಹಾನಗರ ಪಾಲಿಕೆಯ ಆಯುಕ್ತರು, ಕೋರಿದ್ದಾರೆ.

<><><>

ಚಾಮರಾಜನಗರ ವಿಶ್ವವಿದ್ಯಾಲಯದಲ್ಲಿ, 'ವಿಕಸಿತ ಭಾರತ: ಯುವ ಸಂಸತ್ತು' ಶೀರ್ಷಿಕೆ ಅಡಿ, ರಾಷ್ಟ್ರೀಯ ಯುವ ಸಂಸತ್ ಉತ್ಸವಕ್ಕೆ, ಉಪ ಕುಲಪತಿ ಎಂ.ಆರ್. ಗಂಗಾಧರ ಚಾಲನೆ ನೀಡಿದರು. ಬಳಿಕ ಮಾತನಾಡಿ, 'ವಿಕಸಿತ ಭಾರತ' ನಿರ್ಮಾಣದ ಹೆಗ್ಗುರಿಯೊಂದಿಗೆ, ಯುವಜನರ ಆಲೋಚನೆಗಳು ಸಮೀಕರಣ ಗೊಳ್ಳಬೇಕು. ವಿಶ್ವವಿದ್ಯಾಲಯಗಳು ತನ್ಮೂಲಕ, ನಾಯಕತ್ವ ಗುಣ ಮೈಗುಡಿಸುವ ಕೇಂದ್ರಗಳಾಗಬೇಕು, ಎಂದರು.

<><><>

2025–26ನೇ ಸಾಲಿನ, ಪರಿ ಷ್ಕೃತ ವಿದ್ಯುತ್ ದರವನ್ನು, ಮುಂದಿನ ತಿಂಗಳು, ಏಪ್ರಿಲ್‌ನಿಂದ ಜಾರಿಗೊಳಿಸಲು ಮುಂದಾಗಿರುವ, ರಾಜ್ಯ ಸರ್ಕಾರದ ನಿರ್ಧಾರವನ್ನು, ಪುನರ್ ಪರಿಶೀಲಿಸುವಂತೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಸ್ಥೆ, ಒತ್ತಾಯಿಸಿದೆ. ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಹುಬ್ಬಳ್ಳಿಯಲ್ಲಿ ಮಾತನಾಡಿ, ವಿದ್ಯುತ್ ದರ ಹೆಚ್ಚಳದಿಂದ, ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಗಾತ್ರದ ಎಮ್.ಎಸ್.ಎಂ.ಇ. ಕೈಗಾರಿಕೆಗಳು, ಹೆಚ್ಚಿನ ಆರ್ಥಿಕ ಹೊರೆ, ಹೊರಬೇಕಾದ ಸ್ಥಿತಿ ನಿರ್ಮಾಣವಾಗಲಿದೆ ಎಂದು, ಅಭಿಪ್ರಾಯಪಟ್ಟಿದ್ದಾರೆ.

<><><>

ಉದಯ ರೇವಣಕರ – 28 ಸೆಕೆಂದುಗಳು

<><><>

ಬಳ್ಳಾರಿ ಸರಳಾದೇವಿ ಮಹಾವಿದ್ಯಾಲಯದಲ್ಲಿ, ದೀನ ದಯಾಳ ಉಪಾಧ್ಯಾಯ, ಗ್ರಾಮೀಣ ಕೌಶಲ ಯೋಜನೆ ಅಡಿ ಜರುಗಿದ, ಉದ್ಯೋಗ ಮೇಳದಲ್ಲಿ, ಒಟ್ಟು 2 ಸಾವಿರದ 346 ಅಭ್ಯರ್ಥಿಗಳು, ಪಾಲ್ಗೊಂಡಿದ್ದರು. 76ಕ್ಕೂ ಅಧಿಕ ಕಂಪೆನಿಗಳು, ವಿವಿಧ ಹಂತಗಳ ಪರೀಕ್ಷೆಗಳ ಮೂಲಕ, ಸಾವಿರದ 163 ಜನರನ್ನು ಉದ್ಯೋಗಕ್ಕಾಗಿ, ಆಯ್ಕೆ ಮಾಡಿವೆ. ಉದ್ಯೋಗ ಮೇಳಕ್ಕೆ ಚಾಲನೆ ನೀಡಿದ, ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ ಮಾತನಾಡಿ, ಸದ್ಯದಲ್ಲೇ 52 ಸಾವಿರಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು, ರಾಜ್ಯ ಸರ್ಕಾರ ಕ್ರಮ ವಹಿಸಲಿದೆ ಎಂದರು.

<><><>

ನಾಡಿದ್ದು, 7ನೇ ತಾರೀಖು, ಹಾಸನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ, ಉದ್ಯೋಗ ಮೇಳ, ಜರುಗಲಿದೆ ಎಂದು, ಸಂಸದ ಶ್ರೇಯಸ ಪಟೇಲ ತಿಳಿಸಿದ್ದಾರೆ. ಹಾಸನದಲ್ಲಿ ಈ ವಿಷಯ ತಿಳಿಸಿ, ಜಿಲ್ಲಾ ಉಸ್ತುವಾರಿ ಸಚಿವ, ಕೃ ್ಣ ಬೈರೇಗೌಡ ಉದ್ಯೋಗ ಮೇಳಕ್ಕೆ ಚಾಲನೆ ನೀಡಲಿದ್ದು, ನೋಂದಾಯಿತ, ಹತ್ತು ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿಗೆ, ಅರ್ಹತೆಗೆ ಅನುಗುಣವಾಗಿ, ಉದ್ಯೋಗಾವಕಾಶಗಳು ಲಭಿಸಲಿವೆ ಎಂದರು.

<><><>

ಸ್ನಾನಕ್ಕೆಂದು ತೆರಳಿ, ಕೆರೆಯಲ್ಲಿ ಮುಳುಗಿದ, ಮೂವರು ಯುವಕರು ನೀರು ಪಾಲಾಗಿದ್ದು, ಇಬ್ಬರು ಸಾವನ್ನಪ್ಪಿ, ಓರ್ವ ಈಜಿ ದಡ ಸೇರಿದ ಘಟನೆ ಕೊಪ್ಪಳದಲ್ಲಿ ನಡೆದಿದೆ. ತಾಲೂಕಿನ, ಗಂಗಾವತಿಯ, ಗಾಂಧಿನಗರದ, ಸೂರ್ಯ ಮತ್ತು ಅಭಿ ೀಕ ಮೃತಪಟ್ಟಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ, ಮೃತ ದೇಹಗಳನ್ನು ಪತ್ತೆ ಹಚ್ಚಿ, ಪೊಲೀಸರಿಗೆ ಹಸ್ತಾಂತರಿಸಿದ್ದಾರೆ.

<><><>

ಅಂತಾರಾಷ್ಟ್ರೀಯ ಟೆನಿಸ್ ಫೆಡರೇಷನ್, ಐ.ಟಿ.ಎಫ್. ತೊಗರಿ ಕಣಜ, ಕಲಬುರಗಿಯ, ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ, ಈ ತಿಂಗಳ 8ನೇ ತಾರೀಖಿನ ವರೆಗೆ ಆಯೋಜಿಸಿರುವ, ಮಹಿಳಾ ಟೆನಿಸ್ ಪಂದ್ಯದ, ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ, ಭಾರತದ ಅಂಕಿತಾ ರೈನಾ, 6–1, 6–3 ಸೆಟ್‌ಗಳ ಅಂತರದಿಂದ, ಸ್ವದೇಶದ ಸೋನಲ್ ಪಾಟೀಲ ಅವರನ್ನು ಪರಾಭವ ಗೊಳಿಸಿದರು. ಝೀಲ್ ದೇಸಾಯಿ, ಜೆನ್ನಿಫರ್ ಲೂಯಿಖಾಮ್ ವಿರುದ್ಧ, 6–2, 6–1 ನೇರ ಸೆಟ್‌ಗಳಲ್ಲಿ ಜಯ ಸಾಧಿಸಿ, ಎಂಟರ ಘಟ್ಟಕ್ಕೆ ಪ್ರವೇಶಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ಇಂದು ಬೆಳಗಾವಿಗೆ; ಯಡೂರು ಶ್ರೀ ಕ್ಷೇತ್ರದ, ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ.

ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ಸಂಘರ್ಷ; ಕನ್ನಡಿಗರ ಸುರಕ್ಷಿತ ವಾಪಸಾತಿಗೆ, ಹಲವು ಕ್ರಮ – ಜಿ. ಪರಮೇಶ್ವರ.

ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಇಂದು ಮತದಾರರ ಪಟ್ಟಿ ಪರಿಷ್ಕರಣೆ.

ಕಲಬುರಗಿಯಲ್ಲಿ, ಐ.ಟಿ.ಎಫ್. ಮಹಿಳಾ ಟೆನಿಸ್; ಸಿಂಗಲ್ಸ್ ವಿಭಾಗದಲ್ಲಿ, ಅಂಕಿತಾ ರೈನಾ ಹಾಗೂ ಝೀಲ್ ದೇಸಾಯಿ, ಕ್ವಾರ್ಟರ್ ಫೈನಲ್ಸ್ ಪ್ರವೇಶ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>